**ಭತ್ತದ ಸುಸ್ಥಿರ ಉತ್ಪಾದನೆಗಾಗಿ ಸಿಲಿಕಾನ್ ದ್ರಾವಣ ಬಳಕೆ :** ಸಿಲಿಕಾನ್ ದ್ರಾವಣವನ್ನು (ಶೇ. 0.8 ) ಪ್ರತಿ ಲೀಟರ್ ನೀರಿಗೆ 4 ಮಿ.ಲೀ. ನಂತೆ ಭತ್ತದ ಬೆಳೆಗೆ ನಾಟಿ ಮಾಡಿದ 21ನೇ ದಿನದಿಂದ 15 ದಿನದ ಅಂತರದಲ್ಲಿ 4 ಬಾರಿ ಸಿಂಪಡಿಸಬಹುದು.

**ಭತ್ತದಲ್ಲಿ ಭತ್ತದ ಹೊಟ್ಟಿನ ಬೂದಿ ಬಳಕೆ**

ಅರೆ ಮಲೆನಾಡು ಪ್ರದೇಶಗಳಲ್ಲಿ ನಾಟಿ ಮಾಡುವ 2 ವಾರಗಳ ಮೊದಲು ವರ್ಷಕ್ಕೊಮ್ಮೆ ಪ್ರತಿ ಎಕರೆಗೆ 800 ಕಿ.ಗ್ರಾಂ. ಗಳಷ್ಟು ಕಪ್ಪಾಗಿರುವ ಭತ್ತದ ಹೊಟ್ಟಿನ ಬೂದಿ ಒದಗಿಸುವುದು.

**ಭತ್ತದಲ್ಲಿ ಪ್ರೆಸ್‌ಮಡ್ ಬಳಕೆ**

ಭತ್ತದ ಬೆಳೆಗೆ ಬೇಕಾಗುವ ಒಟ್ಟು ಪೋಷಕಾಂಶಗಳಲ್ಲಿ ಶೇ.50 ರಷ್ಟನ್ನು ಪ್ರೆಸ್‌ಮಡ್ (ಸಾರಜನಕ ತತ್ವಮಾನ ಆಧಾರದ ಮೇಲೆ) ಮುಖಾಂತರ ಮತ್ತು ಇನ್ನುಳಿದ ಶೇ.50 ರಷ್ಟನ್ನು ಸಾರಜನಕ, ರಂಜಕ ಮತ್ತು ಪೊಟ್ಯಾಷ್ ರಸಗೊಬ್ಬರಗಳ ಮೂಲಕ ಮಣ್ಣಿಗೆ ಸೇರಿಸುವುದರಿಂದ ಭತ್ತದ ಇಳುವರಿಯಲ್ಲಿ ಸುಸ್ಥಿರತೆಯನ್ನು ಕಾಪಾಡಿಕೊಳ್ಳಬಹುದು.

## 4.10 ಭತ್ತದಲ್ಲಿ ಯಾಂತ್ರೀಕೃತ ಬೇಸಾಯ

ಭತ್ತದ ಬೇಸಾಯದಲ್ಲಿ ಶೇ. 11 ರಷ್ಟು ಭೂಮಿ ಕೆಸರು ಮಾಡಲು, ಶೇ. 38 ರಷ್ಟು ಪೈರು ನಾಟಿ ಮಾಡಲು, ಶೇ. 19 ರಷ್ಟು ಕಳೆ ತೆಗೆಯಲು, ಶೇ. 20 ರಷ್ಟು ಕಟಾವು ಮಾಡಲು ಮತ್ತು ಶೇ. 12 ರಷ್ಟು ಒಕ್ಕಣೆ ಮಾಡಲು ಕಾರ್ಮಿಕರ ಅವಶ್ಯಕತೆಯಿರುತ್ತದೆ. ಕಾರ್ಮಿಕರ ಅವಶ್ಯಕತೆ ಮತ್ತು ಬೇಸಾಯ ಖರ್ಚು ಕಡಿಮೆ ಮಾಡಲು ಯಾಂತ್ರೀಕೃತ ಬೇಸಾಯ ಅಳವಡಿಸುವುದು ಸೂಕ್ತ.




**ಚಿತ್ರ – 6 : ಎಕರೆಗೆ ಸಾರಜನಕದ ಪ್ರಮಾಣ ಕಿ.ಗ್ರಾಂ.ಗಳಲ್ಲಿ**

## I. ಭತ್ತದ ಸಸಿ ನಾಟಿ ಮಾಡುವ ಯಂತ್ರಗಳು

ಚಾಪೆ ಮಾದರಿ ಮಡಿಯಲ್ಲಿ ಬೆಳೆಸಿದ ಭತ್ತದ ಸಸಿಗಳನ್ನು ಹದ ಮಾಡಿದ ಕೆಸರು ಗದ್ದೆಗಳಲ್ಲಿ ನಾಟಿ ಮಾಡಲು ಈ ಯಂತ್ರಗಳನ್ನು ಬಳಸುವುದರಿಂದ ಸಮಯಕ್ಕೆ ಸರಿಯಾಗಿ ನಾಟಿ ಮಾಡಲು ಬೇಕಾಗುವ ಕಾರ್ಮಿಕರ ಖರ್ಚಿನಲ್ಲಿ ಉಳಿತಾಯ ಮಾಡಬಹುದು.

### 1. ಚೈನಾ ಮಾದರಿ ಭತ್ತದ ಸಸಿನಾಟಿ ಮಾಡುವ ಯಂತ್ರ.

ಈ ಯಂತ್ರಕ್ಕೆ 4 ಹೆಚ್.ಪಿ. ಡೀಸೆಲ್ ಯಂತ್ರವನ್ನು ಅಳವಡಿಸಲಾಗಿದೆ. ಈ ಯಂತ್ರವು ಚಾಪೆ ಮಾದರಿ ಮಡಿಯಲ್ಲಿ ಬೆಳೆಸಿದ ಹಾಗೂ ಸುಮಾರು 17 ರಿಂದ 25 ದಿವಸ ವಯಸ್ಸಿನ ಭತ್ತದ ಸಸಿಗಳನ್ನು 10 ಅಂಗುಲ ಅಂತರದ

**ಬೆಳೆಗೆ ಕೊಡಬೇಕಾದ ಸಾರಜನಕದ ಪ್ರಮಾಣ ಮತ್ತು ವಿಧಾನವನ್ನು ನಿರ್ಧರಿಸುವಾಗ ಈ ಮುಂದೆ ಸೂಚಿಸಿದ ಅಂಶಗಳನ್ನು ಗಮನದಲ್ಲಿಡುವುದು:**

| | | |
|---|---|---|
| 1 | ನಾಟಿ ಸಮಯದಲ್ಲಿ | ಕಡೆಯ ಉಳುಮೆ ಮಾಡುವ ನಾಟಿ ಸಮಯದಲ್ಲಿ ಕೊಡಬೇಕಾದ ಸಾರಜನಕವನ್ನು ಬೆರೆಸುವುದು. |
| 2 | ಮೇಲುಗೊಬ್ಬರ ಕೊಡುವ ವಿಧಾನ | 24 ಗಂಟೆಗಳಿಗೆ ಮುಂಚೆ ಗದ್ದೆಯಲ್ಲಿರುವ ನೀರನ್ನೆಲ್ಲಾ ಬಸಿದು ಹೊರ ತೆಗೆಯುವುದು. ಮೇಲುಗೊಬ್ಬರ ಕೊಟ್ಟ 24 ಗಂಟೆಗಳ ನಂತರ ಮತ್ತೆ ನೀರು ಕೊಡುವುದು. |
| 3 | ಮೇಲು ಗೊಬ್ಬರ ಕೊಡುವ ಹಂತಗಳು | ನಾಟಿ ಮಾಡಿದ ಎರಡುವರೆ ಮತ್ತು ಮೂರು ವಾರಗಳ ನಂತರ ಹಾಗೂ ತೆನೆ ಬರುವುದಕ್ಕೆ ಒಂದು ವಾರ ಮೊದಲು |
| 4 | ಮೇಲುಗೊಬ್ಬರದ ಪ್ರಮಾಣ | ಎಕರೆಗೆ 10 ಕೆ.ಜಿ. ಸಾರಜನಕ ಕೊಡುವುದು |
| 5 | ಮಣ್ಣಿನಲ್ಲಿ ಸಾರಜನಕ ಕಡಿಮೆಯಾಗಿದ್ದಾಗ | ನಾಟಿ ಮಾಡುವ ಸಮಯದಲ್ಲಿ ಹೆಚ್ಚು ಸಾರಜನಕ ಒದಗಿಸುವುದು |
| 6 | ಮಣ್ಣಿನಲ್ಲಿ ಸಾಕಷ್ಟು ಸಾರಜನಕದ ಅಂಶವಿದ್ದಾಗ | ನಾಟಿ ಮಾಡುವ ಸಮಯದಲ್ಲಿ ಕಡಿಮೆ ಸಾರಜನಕವನ್ನು ಒದಗಿಸುವುದು. ಉಳಿದ ಸಾರಜನಕವನ್ನು ಮೇಲು ಗೊಬ್ಬರವಾಗಿ ಕೊಡುವುದು |
| 7 | ಮರಳು ಮಿಶ್ರಿತ ಮಣ್ಣಾದಲ್ಲಿ | ಯಾವ ಸಮಯದಲ್ಲೂ ಹೆಚ್ಚು ಪ್ರಮಾಣದಲ್ಲಿ ಸಾರಜನಕವನ್ನು ಒದಗಿಸದಿರುವುದು. |
| 8 | ಕಡಿಮೆ ಇಲುಕುಗಳನ್ನು ಕೊಡುವ ತಳಿಗೆ | ಬೆಳೆಯ ಪ್ರಾರಂಭದಲ್ಲಿ ಹೆಚ್ಚು ಪ್ರಮಾಣದಲ್ಲಿ ಸಾರಜನಕವನ್ನು ಒದಗಿಸುವುದು |
| 9 | ಅಲ್ಪಾವಧಿ ತಳಿಗಳಿಗೆ | ಬೆಳೆಯ ಪ್ರಾರಂಭದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಾರಜನಕವನ್ನು ಒದಗಿಸುವುದು. |
| 10 | ದೀರ್ಘಾವಧಿ ತಳಿಗೆ | ಹೆಚ್ಚು ಸಾರಜನಕವನ್ನು ಮೇಲುಗೊಬ್ಬರವಾಗಿ ಕೊಡುವುದು. |
| 11 | ಬೆಳೆ ಪ್ರಾರಂಭದಲ್ಲಿ ತಂಪಾದ ಹವಾಗುಣವಿದ್ದಲ್ಲಿ | ಹೆಚ್ಚು ಸಾರಜನಕವನ್ನು ಮೇಲುಗೊಬ್ಬರವಾಗಿ ಕೊಡುವುದು. |
| 12 | ದುಂಡಾಣು ರೋಗ ಬರುವ ಸೂಚನೆ ಕಂಡುಬಂದಾಗ | ಹೆಚ್ಚು ಕಂತುಗಳಲ್ಲಿ ಸಾರಜನಕವನ್ನು ಮೇಲುಗೊಬ್ಬರವಾಗಿ ಕೊಡುವುದು. |
| 13 | ಹೆಚ್ಚು ವಯಸ್ಸಾದ ಪೈರನ್ನು ನಾಟಿ ಮಾಡಿದಾಗ | ಕಡಿಮೆ ಅಂತರದಲ್ಲಿ ನಾಟಿ ಮಾಡುವುದು ಮತ್ತು ನಾಟಿ ಸಮಯದಲ್ಲಿ ಹೆಚ್ಚು ಸಾರಜನಕ ಕೊಡುವುದು. |
| 14 | ಸಾರಜನಕವನ್ನು ಉಪಯೋಗಿಸುವ ರೂಪ | ಅಮೋನಿಯಂ ಸಲ್ಫೇಟ್ ಅಥವಾ ಯೂರಿಯಾ ರೂಪದಲ್ಲಿ ಒದಗಿಸುವುದು. |

8 ಸಾಲುಗಳಲ್ಲಿ ಸಸಿಯಿಂದ ಸಸಿಗೆ ನಿಗದಿಪಡಿಸಿದ ಅಂತರದಲ್ಲಿ ಚಾಲಕ ಮತ್ತು ಇಬ್ಬರು ಕಾರ್ಮಿಕರ ಸಹಾಯದಿಂದ ದಿನವೊಂದಕ್ಕೆ ಸರಾಸರಿ ಸುಮಾರು 8.5–8.75 ಎಕರೆ ಪ್ರದೇಶದಲ್ಲಿ ನಾಟಿ ಮಾಡಬಹುದು. ಈ ಯಂತ್ರವನ್ನು ಬಳಸುವುದರಿಂದ ಶೇ. 75 ರಿಂದ 80ರಷ್ಟು ಕಾರ್ಮಿಕರ ಮತ್ತು ಶೇ. 46ರಷ್ಟು ನಾಟಿ ಮಾಡುವ ಖರ್ಚಿನಲ್ಲಿ ಉಳಿತಾಯ ಮಾಡಬಹುದು.

### 2. ಕೊರಿಯನ್ ಭತ್ತದ ಸಸಿ ನಾಟಿ ಮಾಡುವ ಯಂತ್ರ

ಈ ಯಂತ್ರಕ್ಕೆ 3 ಹೆಚ್.ಪಿ. ಪೆಟ್ರೋಲ್/ ಸೀಮೆಎಣ್ಣೆ ಚಾಲಿತ ಯಂತ್ರವನ್ನು ಅಳವಡಿಸಲಾಗಿದೆ. ಈ ಯಂತ್ರವು ಚಾಪೆ ಮಾದರಿ ಮಡಿಯಲ್ಲಿ ಬೆಳೆಸಿದ ಹಾಗೂ ಸುಮಾರು 17 ರಿಂದ 25 ದಿವಸ ವಯಸ್ಸಿನ ಭತ್ತದ ಸಸಿಗಳನ್ನು 1 ಅಡಿ ಅಂತರದ 4 ಸಾಲುಗಳಲ್ಲಿ ಸಸಿಯಿಂದ ಸಸಿಗೆ ನಿಗದಿಪಡಿಸಿದ ಅಂತರದಲ್ಲಿ ಚಾಲಕ ಮತ್ತು ಇಬ್ಬರು ಕಾರ್ಮಿಕರ ಸಹಾಯದಿಂದ ದಿನವೊಂದಕ್ಕೆ ಸರಾಸರಿ ಸುಮಾರು 8.5 – 8.75 ಎಕರೆ ಪ್ರದೇಶದಲ್ಲಿ ನಾಟಿ ಮಾಡಬಹುದು. ಈ ಯಂತ್ರವನ್ನು ಬಳಸುವುದರಿಂದ ಶೇ. 75 ರಿಂದ 80 ರಷ್ಟು ಕಾರ್ಮಿಕರ ಮತ್ತು ಶೇ. 70ರಷ್ಟು ನಾಟಿ ಮಾಡುವ ಖರ್ಚಿನಲ್ಲಿ ಉಳಿತಾಯ ಮಾಡಬಹುದು.

### 2. ಕಳೆ ತೆಗೆಯುವ ಉಪಕರಣ

ಈ ಉಪಕರಣವನ್ನು **'ಕೊನೋ ವೀಡರ್'** ಎಂದು ಕರೆಯಲಾಗಿದ್ದು, ಒಳ್ಳೆಯ ಗುಣಮಟ್ಟದ ಕಬ್ಬಿಣವನ್ನು ಬಳಸಿ ಹಗುರವಾಗಿ ತಯಾರಿಸಲ್ಪಟ್ಟಿದೆ. ಇದರ ತೂಕ ಸುಮಾರು 5 ಕಿ.ಗ್ರಾಂ. ಈ ಉಪಕರಣವನ್ನು ಸಾಲು ನಾಟಿ ಮಾಡಿದ ಗದ್ದೆಗಳಲ್ಲಿ 2 ಸಾಲುಗಳ ಮಧ್ಯೆ ಕೆಸರಿನಲ್ಲಿ ಚಲಿಸಿದಾಗ ಕಳೆ ಮತ್ತು ಇತರೆ ಎಲೆ ಕಡ್ಡಿಗಳು ಕೆಸರಿನಲ್ಲಿ ಸೇರಿ ಒಳ್ಳೆಯ ಉತ್ಕೃಷ್ಟ ಗೊಬ್ಬರವಾಗುವುದರ ಜೊತೆಗೆ ಕಳೆಯನ್ನು ಸುಲಭವಾಗಿ ನಿರ್ವಹಣೆ ಮಾಡಲು ಅನುಕೂಲವಾಗುತ್ತದೆ. ಈ ಉಪಕರಣವನ್ನು ಬಳಸಿ ಒಬ್ಬ ನುರಿತ ಆಳು ದಿನವೊಂದಕ್ಕೆ 0.25 ಎಕರೆ ಭತ್ತದಲ್ಲಿ ಕಳೆ ನಿರ್ವಹಣೆ ಮಾಡಬಹುದು. ಈ ಯಂತ್ರವನ್ನು ಬಳಸುವುದರಿಂದ ಸುಮಾರು ಶೇ.50 ರಷ್ಟು ಕಾರ್ಮಿಕರ ಸಂಖ್ಯೆ ಮತ್ತು ಶೇ.30 ರಷ್ಟು ಕಳೆ ತೆಗೆಯುವ ಖರ್ಚಿನಲ್ಲಿ ಉಳಿತಾಯ ಮಾಡಬಹುದು.

## III. ಭತ್ತ ಕಟಾವು ಮಾಡುವ ಯಂತ್ರಗಳು

### 1. ರೀಪರ್

ಈ ಉಪಕರಣವನ್ನು ಪವರ್ ಟಿಲ್ಲರ್ ಮುಂಭಾಗದಲ್ಲಿ ಜೋಡಿಸಿ ಭತ್ತದ ಪೈರನ್ನು ಕಟಾವು ಮಾಡಬಹುದು. ಈ ಯಂತ್ರವು ಒಂದು ಸಲಕ್ಕೆ 3.5 ಅಡಿ ಅಗಲದಲ್ಲಿ ಭತ್ತದ ಪೈರನ್ನು ಕಟಾವು ಮಾಡಿ ನೆಲದ ಮೇಲೆ ಸಮವಾಗಿ ಜೋಡಿಸುತ್ತದೆ. ನಂತರ ಕಟಾವು ಮಾಡಿದ ಭತ್ತದ ಪೈರನ್ನು ಆಳಿನ ಸಹಾಯದಿಂದ ಒಟ್ಟುಗೂಡಿಸಿ ಸಾಗಣೆ ಮಾಡಬಹುದು. ಚಾಲಕ ಮತ್ತು ಎರಡು ಕಾರ್ಮಿಕರ ಸಹಾಯದಿಂದ ದಿನವೊಂದಕ್ಕೆ ಸುಮಾರು 8.0 ಎಕರೆ ಪ್ರದೇಶದಲ್ಲಿ ನಿಂತ ಭತ್ತ ಫಸಲನ್ನು ಕಟಾವು ಮಾಡಬಹುದು. ಈ ಉಪಕರಣವನ್ನು ಬಳಸುವುದರಿಂದ ಶೇ. 84 ರಷ್ಟು ಕಾರ್ಮಿಕರ ಮತ್ತು ಶೇ. 65 ರಷ್ಟು ಕಟಾವು ಮಾಡುವ ಖರ್ಚಿನಲ್ಲಿ ಉಳಿತಾಯವಾಗುತ್ತದೆ.

### 2. ಯಂತ್ರಚಾಲಿತ ಭತ್ತ ಕಟಾವು ಮಾಡುವ ಯಂತ್ರ

ಈ ಯಂತ್ರಕ್ಕೆ 3.5 ಹೆಚ್.ಪಿ. ಪೆಟ್ರೋಲ್ ಸ್ಟಾರ್ಟ್ ಸೀಮೆ ಎಣ್ಣೆ ಚಾಲಿತ ಯಂತ್ರವನ್ನು ಅಳವಡಿಸಲಾಗಿದೆ. ಈ ಯಂತ್ರ ಒಂದು ಸಲಕ್ಕೆ 3.0–3.5 ಅಡಿ ಅಗಲದ ಭತ್ತದ ಪೈರನ್ನು ಕಟಾವು ಮಾಡಿ ನೆಲದ ಮೇಲೆ ಸಮವಾಗಿ ಜೋಡಿಸುತ್ತದೆ. ನಂತರ ಕಟಾವು ಮಾಡಿದ ಭತ್ತದ ಫಸಲನ್ನು ಅಳಿನ ಸಹಾಯದಿಂದ ಒಟ್ಟುಗೂಡಿಸಿ ಸಾಗಾಣಿಕೆ ಮಾಡಬಹುದು. ಚಾಲಕ ಮತ್ತು ಎರಡು ಅಳುಗಳ ಸಹಾಯದಿಂದ ದಿನವೊಂದಕ್ಕೆ ಸರಾಸರಿ ಸುಮಾರು 8.0 ಎಕರೆ

ಪ್ರದೇಶದಲ್ಲಿ ಭತ್ತ ಪಸಲನ್ನು ಕಟಾವು ಮಾಡಬಹುದು. ಈ ಯಂತ್ರವನ್ನು ಬಳಸುವುದರಿಂದ ಶೇ. 90 ರಷ್ಟು ಆಳಿನ ಮತ್ತು ಶೇ.70 ರಷ್ಟು ಕಟಾವು ಮಾಡುವ ಖರ್ಚಿನಲ್ಲಿ ಉಳಿತಾಯ ಮಾಡಬಹುದು.

## IV. ಭತ್ತ ಒಕ್ಕಣೆ ಮಾಡುವ ಯಂತ್ರ

ಮಾರುಕಟ್ಟೆಯಲ್ಲಿ ದೊರೆಯುವ ಬಹು ಬೆಳೆ ಒಕ್ಕಣೆ ಮಾಡುವ ಯಂತ್ರದಲ್ಲಿ ಹಲವಾರು ಹೊಂದಾಣಿಕೆಗಳನ್ನು ಮಾಡಿಕೊಂಡು ಭತ್ತ ಒಕ್ಕಣೆ ಮಾಡಲು ಉಪಯೋಗಿಸಬಹುದು. ಹೊಂದಾಣಿಕೆ ಮಾಡಬೇಕಾದ ಭಾಗಗಳೆಂದರೆ ಡ್ರಮ್ ತಿರುಗುವಿಕೆಯನ್ನು 800 ರಿಂದ 850 ಆರ್.ಪಿ.ಎಂ. ಹಾಗೂ ಡ್ರಮ್ ಮತ್ತು ಕಾನ್‌ಕೇವ್ ಮಧ್ಯದ ಜಾಗವನ್ನು 10 ರಿಂದ 12 ಅಂಗುಲ ಅಂತರದಲ್ಲಿ ಜೋಡಿಸಿ ಭತ್ತದ ಒಕ್ಕಣೆ ಮಾಡಲು ಈ ಯಂತ್ರವನ್ನು ಬಳಸಬಹುದು. ಈ ಯಂತ್ರದಿಂದ ಗಂಟೆಗೆ 400 ರಿಂದ 500 ಕಿ.ಗ್ರಾಂ. ಭತ್ತವನ್ನು ಒಕ್ಕಣೆ ಮಾಡಬಹುದು. ಈ ಯಂತ್ರವನ್ನು ಭತ್ತ ಒಕ್ಕಣೆ ಮಾಡಲು ಬಳಸುವುದರಿಂದ ಶೇ. 56 ರಷ್ಟು ಒಕ್ಕಣೆ ಖರ್ಚು ಉಳಿಸಬಹುದು. ಈ ಯಂತ್ರವನ್ನು ಪವರ್ ಟಿಲ್ಲರ್ ಅಥವಾ ಟ್ರ್ಯಾಕ್ಟರ್‌ಗೆ ಜೋಡಿಸಿ ಚಾಲನೆ ಮಾಡಬಹುದು.

**ಮುಖ್ಯವಾದ ಕಡಿಮೆ ಖರ್ಚಿನ ಬೇಸಾಯ ಕ್ರಮಗಳು**

- ಬೇಸಿಗೆ ಭತ್ತದಲ್ಲಿ ನಾಟಿ ಕೆಲಸವನ್ನು ಫೆಬ್ರವರಿ 15 ರೊಳಗೆ ಪೂರ್ತಿ ಮಾಡುವುದು.
- 18–21 ದಿನಗಳ ಪೈರನ್ನು ನಾಟಿಗೆ ಬಳಸುವುದರಿಂದ ಅಧಿಕ ಇಳುವರಿ ಪಡೆಯಬಹುದು.
- 2 ಅಂಗುಲಕ್ಕಿಂತ ಹೆಚ್ಚಿನ ಆಳದಲ್ಲಿ ಪೈರು ನಾಟಿ ಮಾಡದಿರುವುದು.
- ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್‌ನ್ನು ನಾಟಿಗೆ ಮೂರು ವಾರಗಳ ಮೊದಲೇ ಮಣ್ಣಿನಲ್ಲಿ ಬೆರೆಸುವುದು.
- ತಡವಾಗಿ ಬರುವ ತಳಿಯಾದಲ್ಲಿ ಪ್ರತಿ 10 ಚದರ ಅಡಿ ಪ್ರದೇಶಕ್ಕೆ 45 ರಿಂದ 46 ಗುಣಿಗಳು ಬರುವಂತೆ ನಾಟಿ ಮಾಡುವುದು. ಬೇಗ ಬರುವ ತಳಿಗಳಾದಲ್ಲಿ ಪ್ರತಿ 10 ಚದರ ಅಡಿ ಪ್ರದೇಶಕ್ಕೆ 58 ರಿಂದ 59 ಗುಣಿಗಳು ಬರುವಂತೆ ನಾಟಿ ಮಾಡಬಹುದು.
- ಸಂಕರಣ ತಳಿಗಳಾದಲ್ಲಿ ಪ್ರತಿ 10 ಚದರ ಅಡಿ ಪ್ರದೇಶಕ್ಕೆ 40 ಗುಣಿಗಳು ಬರುವಂತೆ ನಾಟಿ ಮಾಡುವುದು.